ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಕಾರವಾರ ವಿಭಾಗ, ಕಾರವಾರ.
ಎಂ.ಜಿ.ರಸ್ತೆ, ಕಾಜುಬಾಗ,
ಕಾರವಾರ-581 301
ಕರ್ನಾಟಕ.

FOREST DEPARTMENT KARNATAKA

ದೂರವಾಣಿ:08382-226365
ಇ-ಮೇಲ್: karwardcf@gmail.com

ಕ್ರ.ಸಂ:ಬಿ4/ಜಿಎಫ್ಎಲ್/ಎಫ್‌ಸಿಎ/ಎಸ್ಆರ್-11/2011-12 ದಿನಾಂಕ: 06-05-2022

Project Director,
National Highway Authority of India,
Project Implementation Unit,
Door No.3-29, "Bethel",
Tharethota, Near Pumpwell (NH-66),
Mangalore-575005
-ಇವರಿಗೆ,

ಮಾನ್ಯರೇ,

ವಿಷಯ: Re-diversion of 2.469 ha. Forest land in Hattikeri Village Sy No.10/A1A1A Belekeri Hobali, Ankola Taluk Uttar Kannada District, Karwar Division for establishing Toll plaza with amenities (shifting from existing location at CH.117+900 to CH.131+200) in Goa-Karnataka Border and Kundapur Section of NH-66 Project Seabird (Primary User Agency) in favour of Project Director, National Highways Authority of India (NHAI) project Implementation Unit (PIU), Mangalore (Secondary User Agency)-reg.

ಉಲ್ಲೇಖ:
1) ಕೇಂದ್ರ ಸರ್ಕಾರದ ಪತ್ರ ಸಂ: ದಿನಾಂಕ:F.N0.F(C)A/11.1/17/KAR/1613 ದಿನಾಂಕ: 21-03-2022
2) ಸರ್ಕಾರದ ಪತ್ರ ಸಂ:ಅಪಜೀ 41 ಎಫ್ಎಲ್ಎಲ್ 2020 (ಇ) ದಿನಾಂಕ: 19-04-2022
3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್‌ಸಿಎ) ಬೆಂಗಳೂರು ರವರ ಪತ್ರ ಸಂ:KFD/HOFF/A52K(GFL)/18/2019-FC ದಿನಾಂಕ:21-04-2022 *(ಪ್ರತಿ ನಿಮಗೂ ಸಲ್ಲಿಸಲಾಗಿದೆ.)*
4) ಈ ಕಚೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 12-12-2021

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿಯ ಉಲ್ಲೇಖ (4) ರ ಪತ್ರದಲ್ಲಿ ಈ ಹಿಂದೆ ಸೀಬರ್ಡ ನೌಕಾನೆಲೆ ಯೋಜನೆಗೆ ಅರಣ್ಯ ಸಂರಕ್ಷಣಾ ಕಾಯ್ದೆ 1980 ರಡಿ ಬಿಡುಗಡೆಗೊಳಿಸಿದ 2259.00 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ 9.136 ಹೆಕ್ಟೇರ್ ಅರಣ್ಯ ಭೂಮಿಯನ್ನು ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕಾಗಿ ಉಪಯೋಗಿಸುವ ಬಗ್ಗೆ ಒಡಂಬಡಿಕೆ ಮಾಡಿಕೊಂಡು, ಸದರ ಭೂಮಿಯಲ್ಲಿ 6.68 ಹೆಕ್ಟೇರ್ ಕ್ಷೇತ್ರವನ್ನು ಮಾತ್ರ ಭಾರತ ಸರ್ಕಾರದ ಪರಿಸರ ಹವಾಮಾನ ಬದಲಾವಣೆ ಸಚಿವಾಲಯದಿಂದ ಅನುಮೋದನೆಯನ್ನು ಪಡೆದುಕೊಂಡಿದ್ದು, 2.469 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಕೇಂದ್ರ ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆದುಕೊಳ್ಳದೇ Toll plaza with amenities ಕಟ್ಟಡವನ್ನು ಉಪಯೋಗಿಸುತ್ತಿರುವ ಬಗ್ಗೆ ಸ್ಪಷ್ಟೀಕರಣವನ್ನು ನೀಡಲು ಕೋರಲಾಗಿತ್ತು. ಆದರೆ, ಈವರೆಗೂ ತಮ್ಮಿಂದ ಈ ಬಗ್ಗೆ ಯಾವುದೇ ವರದಿಯು ಪ್ರಾಪ್ತವಾಗಿದ್ದು ಇರುವುದಿಲ್ಲ.

ಸದರ 2.469 ಹೆಕ್ಟೇರ್ ಅರಣ್ಯ ಭೂಮಿ ಮರು ಬಿಡುಗಡೆ ಕುರಿತು ಸಲ್ಲಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಲ್ಲೇಖ (1) ರ ಕೇಂದ್ರ ಸರ್ಕಾರದ ಪತ್ರದಲ್ಲಿ Toll plaza with amenities ಕಟ್ಟಡವನ್ನು 1980 ರ ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಅನುಮೋದನೆಯನ್ನು ಪಡೆಯದೇ ಕಟ್ಟಿರುವ ಬಗ್ಗೆ ಹಾಗೂ ಅರಣ್ಯ ಇಲಾಖೆಯಿಂದ ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಮತ್ತು 2.469 ಹೆಕ್ಟೇರ್ ಅರಣ್ಯ ಭೂಮಿ ಮರು ಬಿಡುಗಡೆ ಪ್ರಸ್ತಾವನೆಯನ್ನು ಪರಿಗಣಿಸುವ ಕುರಿತು ಸ್ಪಷ್ಟೀಕರಣವನ್ನು ನೀಡಲು ತಿಳಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಕಾರಣ, ಈ ಮೇಲಿನಂತೆ 2.469 ಹೆಕ್ಟೇರ್ ಅರಣ್ಯ ಭೂಮಿಯನ್ನು ಬಿಡುಗಡೆಗೆ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಉಲ್ಲೇಖ (1) ಮತ್ತು (4) ರ ಪತ್ರಗಳಲ್ಲಿ ತಿಳಿಸಿರುವತೆ 2.469 ಹೆಕ್ಟೇರ್ ಕ್ಷೇತ್ರದಲ್ಲಿ Toll plaza with amenities ಕಟ್ಟಡವನ್ನು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆಯದೇ ಕಟ್ಟಲಾದ ಬಗ್ಗೆ ಸ್ಪಷ್ಟೀಕರಣವನ್ನು ಈ ಕಚೇರಿಗೆ ಸಲ್ಲಿಸಲು ಕೋರಿದೆ. ಹಾಗೂ ಸದರ ಪ್ರಸ್ತಾವನೆಯ ಅಂತರಜಾಲ ತಾಣದ ಲಿಂಕನ್ನು ಮುಂದಿನ ಕ್ರಮಕ್ಕಾಗಿ ನಿಮಗೆ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

-Sd/-

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾರವಾರ ವಿಭಾಗ, ಕಾರವಾರ.

ಪ್ರತಿಯನ್ನು Deputy Director General (PI), Project Seabird, Naval Base, Arga, Karwar ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.